**ಸಿ.ಸಿ. ನಂಬರಃ 2408/2024**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 19-02-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಎ.ಎ. ವಕೀಲರಿಂದ,**

5. ನಿಪಿ-1 ರ ಮೂಲ ಠರಾವಿನ ದೃಢೀಕೃತ ನಕಲನ್ನು ಹಾಜರುಪಡಿಸಿರುವುದಿಲ್ಲ. ಮೂಲ ಠರಾವಿನಲ್ಲಿ ಸಭೆಗೆ ಹಾಜರಿದ್ದ ಎಲ್ಲಾ ನಿರ್ದೇಶಕರ ಸಹಿ ಇರುತ್ತದೆ ಎಂದರೆ ಹೌದು. ಠರಾವು ಸಂಖ್ಯೆ 12 ನನಗೆ ಈ ಪ್ರಕರಣ ಮತ್ತು ಎಲ್ಲಾ ಪ್ರಕರಣವನ್ನು ನಡೆಸಲು ಅಧಿಕಾರ ನೀಡುವುದಕ್ಕೆ ಸಂಬಂಧಿಸಿದ್ದಾಗಿರುತ್ತದೆ. ನನಗೆ ಅಧಿಕಾರ ನೀಡಿರುವುದಕ್ಕೆ ಸಂಬಂಧಿಸಿದಂತೆ ಅದರ ಮೂಲ ಪ್ರತಿಯ ಪ್ರತಿಯನ್ನು ಹಾಜರುಪಡಿಸಿದರೆ, ನಿಜಾಂಶ ಗೊತ್ತಾಗುತ್ತದೆ ಎಂದು ಅದಕ್ಕೆ ಸಂಬಂಧಿಸದೇ ಇರುವ ನಿಪಿ-1 ನ್ನು ಹಾಜರುಪಡಿಸಿದ್ದು, ಅದಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಧಿಕಾರ ನೀಡಿದ ಮೂಲ ಠರಾವಿನ ಪ್ರತಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

6. ಆರೋಪಿಗೆ ಸಾಲ ನೀಡುವಾಗ ಆತನಿಂದ ಆಧಾರ ಕಾರ್ಡ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಗೆ ನಿಪಿ-4 ನೋಟೀಸು ಜಾರಿಯಾಗಿರುತ್ತದೆ. ಆರೋಪಿಗೆ ನೋಟಿಸು ಜಾರಿಯಾಗದೇ ಇದ್ದರೂ ಸಹ, ಜಾರಿಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುರ್ಡೇಶ್ವರದ ನ್ಯಾಶನಲ್ ಕಾಲೋನಿಯಲ್ಲಿ ಸುಮಾರು ಐದು ಸಾವಿರಕ್ಕಿಂತ ಹೆಚ್ಚು ಮನೆಗಳು ಇರುತ್ತವೆ ಎಂದರೆ, ಸಾಕ್ಷಿಯು ಇರಬಹುದು ಎಂದು ಉತ್ತರಿಸಿರುತ್ತಾರೆ. ಆರೋಪಿಯ ಸರಿಯಾದ ವಿಳಾಸವನ್ನು ನೋಟೀಸು ಜಾರಿ ಮಾಡಲು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ನೋಟೀಸಿನಲ್ಲಿ ಆರೋಪಿಯ ತಪ್ಪು ವಿಳಾಸ ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸು ಜಾರಿಯಾಗಿದ್ದರೆ, ಆತ ಮರು ಉತ್ತರ ನೀಡುತ್ತಿದ್ದನು ಎಂದರೆ, ಸಾಕ್ಷಿಯು ಆರೋಪಿಗೆ ನೋಟೀಸಿನ ಬಗ್ಗೆ ಅಂಚೆ ಇಲಾಖೆಯವರು ಮಾಹಿತಿ ನೀಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತೆ ಅಂಚೆ ಇಲಾಖೆಯವರು ನೋಟೀಸಿನ ಬಗ್ಗೆ ಆರೋಪಿಗೆ ಮಾಹಿತಿ ನೀಡಿದ ಬಗ್ಗೆ ಪ್ರತ್ಯೇಕ ದಾಖಲೆ ಪಡೆದುಕೊಂಡಿದ್ದೀರಾ ಎಂದರೆ, ಸಾಕ್ಷಿಯು ನಿಪಿ-6 ನೋಟೀಸಿನಲ್ಲೇ ಆ ಬಗ್ಗೆ ನಮೂದು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ-6 ನೋಟೀಸಿನಲ್ಲಿರುವ ಹಿಂಬರಹ ಕಾನೂನುಬದ್ಧವಾಗಿಲ್ಲ ಎಂದರೆ ಸರಿಯಲ್ಲ.

7. ನಿಪಿ-7 ಸಾಲದ ಅರ್ಜಿಯನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ. ನಿಪಿ-7 ಸಾಲದ ಅರ್ಜಿಯಲ್ಲಿರುವ 1 ರಿಂದ 4 ನೇ ಪುಟದವರೆಗಿನ ಮಾಹಿತಿಯನ್ನು ಆರೋಪಿಯೇ ಬರೆದಿರುತ್ತಾರೆ. ಆ ರೀತಿ ಆರೋಪಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿ ಹೇಳಿದ ಸಾಲಕ್ಕೆ ಆಸ್ತಿಯನ್ನು ಅಡಮಾನ ಇಟ್ಟು ನೀಡಿರುತ್ತೇವೆ. ದೂರಿನಲ್ಲಿ ಹೇಳಿದ ಸಾಲದ ಅವಧಿಯು 2020 ರ ಫೆಬ್ರವರಿ ತಿಂಗಳಿನಲ್ಲಿ ಮುಗಿದಿರುತ್ತದೆ. ಸಾಲದ ಅವಧಿ ಮುಗಿದ ನಂತರ ತಕ್ಷಣ ಕ್ರಮ ಕೈಗೊಳ್ಳದೇ ಫಿರ್ಯಾದಿ ಸಂಸ್ಥೆಯು ನಿಯಮಾನುಸಾರ ವಸೂಲಿ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಹೇಳಿದ ಸಾಲವು ಅವಧಿ ಮೀರಿದ ಸಾಲವಾಗಿರುತ್ತದೆ ಎಂದರೆ ಸರಿಯಲ್ಲ.

8. ದೂರಿನಲ್ಲಿ ಹೇಳಿದ ಸಾಲಕ್ಕೆ ಸೇವಾ ವೆಚ್ಚವನ್ನು ಹಾಕಿರುವುದಿಲ್ಲ. ನಿಪಿ-11 ರಲ್ಲಿ ಕಂಡುಬರುವಂತೆ ದಿನಾಂಕಃ 07-02-2019 ರಂದು ಚೆಕ್ ಮೂಲಕ ಹಣ ಪಡೆದ ಬಗ್ಗೆ ದಾಖಲಾತಿ ಇರುತ್ತದೆ. ಆರೋಪಿ ಎಷ್ಟು ಬಾರಿ ಫಿರ್ಯಾದಿ ಸಂಸ್ಥೆಗೆ ಬಂದಿರುತ್ತಾರೆ ಎಂದು ನೆನಪಿಲ್ಲ. ಆರೋಪಿ ಚೆಕ್ ನ್ನು ಫಿರ್ಯಾದಿ ಸಂಸ್ಥೆಗೆ ಬಂದು ನೀಡಿರುತ್ತಾನೆ. ನಿಪಿ-11 ರಲ್ಲಿ ಆರೋಪಿಗೆ ಕಳುಹಿಸಿದ ನೋಟೀಸಿನ ಖರ್ಚನ್ನು ನಮೂದು ಮಾಡಿರುವುದಿಲ್ಲ. ದಿನಾಂಕಃ 07-02-2019 ರಿಂದ 08-08-2024 ರವರೆಗೆ ದೂರಿನಲ್ಲಿ ಹೇಳಿದ ಸಾಲಕ್ಕೆ ಒಟ್ಟೂ ಹದಿನಾರು ಸಾವಿರ ರೂಪಾಯಿ ದಂಡದ ಬಡ್ಡಿಯನ್ನು ವಿಧಿಸಿರುತ್ತೇವೆ. ನಿಪಿ-11 ಸಾಲದ ಸ್ಟೇಟ್ ಮೆಂಟ್ ಸಂಪೂರ್ಣವಾಗಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 08-08-2024 ರ ನಂತರ ಮಾಡಿದ ವ್ಯವಹಾರಗಳನ್ನು ಮರೆಮಾಚಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2 ಚೆಕ್ ನ್ನು ಆರೋಪಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ನಮೂದು ಮಾಡಿರುವ ಮೊತ್ತವನ್ನು ನಾವೇ ನಮೂದು ಮಾಡಿ, ಸುಳ್ಳು ಕೇಸು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**